
# ನವೋತ್ಥಾನದ ಅಧ್ವರ್ಯುಗಳು

ಎಸ್. ಆರ್. ರಾಮಸ್ವಾಮಿ ಅವರ '**ನವೋತ್ಥಾನದ ಅಧ್ವರ್ಯುಗಳು**' ಸ್ವಾತಂತ್ರ್ಯ ಸಿಗುವ ಮೊದಲಿನ ಒಂದು ಶತಮಾನದಲ್ಲಿ ನಮ್ಮದೇ ಆದ ರಾಷ್ಟ್ರಜೀವನವನ್ನು ಕಟ್ಟಿಕೊಳ್ಳುವ ಸ್ವಸ್ವರೂಪ ದೃಢೀಕರಣದ ಪ್ರಯತ್ನದ ಮುಂದಾಳುಗಳ ಕೆಲಸವನ್ನು ಗುರುತಿಸುವ ಪುಸ್ತಕ. ಪರಕೀಯರ ಆಳ್ವಿಕೆ, ಅನುಕರಣಶೀಲರಾದ ನಮ್ಮವರ ನಿರುತ್ಸಾಹ, ಹೆಚ್ಚೇಕೆ, ವಿರೋಧಗಳ ನಡುವೆ ಈ ಪ್ರವರ್ತಕರ ಸಾಧನೆ ಅಸಾಮಾನ್ಯ.

ಭೂಮಿಕೆಯಲ್ಲಿ ಲೇಖಕರು ಕ್ರಿಸ್ತಪೂರ್ವ ನಾಲ್ಕನೇ ಶತಮಾನದಿಂದ ಕೆಲವು ಶತಮಾನಗಳ ಗುಪ್ತರ ಸುವರ್ಣಯುಗ ಕೊನೆಗೊಂಡ ಅನಂತರ ೧೪ನೇ ಶತಮಾನದ ವಿಜಯನಗರದ ಆಳ್ವಿಕೆಯ ತನಕ ಸಮಾಜ ಸ್ಥಗಿತವಾಗಿತ್ತು, ಅನಂತರ ಶಿವಾಜಿಯ ಕಾಲದಲ್ಲಿ ಸ್ವಲ್ಪಮಟ್ಟಿಗೆ ತಲೆ ಎತ್ತಿತು. ಅನಂತರ ಮತ್ತೆ ಸ್ಥಗಿತ ಪರ್ವ. ಔರಂಗಜೇಬನ ಕೊನೆಯ ದಿನಗಳಲ್ಲಿ ಆಳ್ವಿಕೆ ದುರ್ಬಲವಾದುದರ ಲಾಭ ಪಡೆದು, ಕಂಪನಿಯವರು ಸಂಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತ ಇಡೀ ಭಾರತವನ್ನು ತಮ್ಮ ವಸಾಹತನ್ನಾಗಿಸಿದರು. ೧೭೫೭ರ ಪ್ಲಾಸಿ ಕದನ ನಿರ್ಣಾಯಕವಾಯಿತು. ಧರ್ಮದ ಮೇಲಿನ ಆಕ್ರಮಣ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಡೆ ನೀಡಿತು. ವಿದೇಶೀ ಪ್ರಭುತ್ವದಿಂದ ಮುಕ್ತಗೊಳ್ಳಬೇಕೆಂಬ ತುಡಿತಕ್ಕಿಂತ ನಮ್ಮ ಧರ್ಮ, ಸಂಸ್ಕೃತಿಗಳನ್ನು ಉಳಿಸಿಕೊಳ್ಳಬೇಕೆಂಬ ಹಂಬಲ ಹೆಚ್ಚಿತ್ತು. ಆದರೂ ಮ್ಲೇಚ್ಛರ ಪ್ರಭುತ್ವ ಮುನ್ನೂರು ವರ್ಷಗಳು ಮುಂದುವರಿಯಿತು. ಬ್ರಿಟಿಷರು ಶಿಕ್ಷಣ, ಸಮಾಜ ಹಾಗೂ ಉದ್ಯಮಗಳನ್ನು ಧ್ವಂಸಗೊಳಿಸಿದರು. ವಿದೇಶೀ ಕಣ್ಣುಗಳಿಂದ ತಮ್ಮನ್ನು ನೋಡಿಕೊಂಡು ಹೀನಾಯವಾಗಿ ಭಾವಿಸುವುದನ್ನು ಕಲಿಸಿದರು. ಮಾನವ ಪ್ರಗತಿಗೆ ಯೂರೋಪೀಯ ನೆಲಗಟ್ಟಿನದೊಂದೇ ದಾರಿ ಎಂಬ ಭ್ರಮೆ ಹರಡಿತು. ಈಗಲೂ ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆಯ ಮುಂದುವರಿಕೆಯಾಗಿ ಸೆಕ್ಯುಲರಿಸಂ ಚಲಾವಣೆಯಲ್ಲಿದೆ. ಈ ಹಿನ್ನೆಲೆಯಲ್ಲಿ ರಾಮಮೋಹನರಾಯ್‌ನಿಂದ ಮೊದಲಾಗಿ, ಅರವಿಂದರ ವರೆಗೆ ಸ್ವಾತಂತ್ರ್ಯ ಹೋರಾಟವು ಧಾರ್ಮಿಕ ಪುನರ್ಜಾಗರಣದ ವ್ಯಾವಹಾರಿಕ ಅಭಿವ್ಯಕ್ತಿ ಎಂದು ಲೇಖಕರು ಗುರುತಿಸುತ್ತಾರೆ. ರಾಜನಾರಾಯಣ ಬೋಸ್, ಸುರೇಂದ್ರನಾಥ ಬ್ಯಾನರ್ಜಿ, ಗಾಜುಲು ಲಕ್ಷ್ಮೀನರಸು ಚೆಟ್ಟಿ, ದಾದಾಭಾಯಿ ನವರೋಜಿ, ವಿ.ಓ. ಚಿದಂಬರಂ ಪಿಳ್ಳೈ ಮೊದಲಾದವರ ಕೊಡುಗೆಯನ್ನು ಸಂಕ್ಷಿಪ್ತವಾಗಿ ಚಿತ್ರಿಸಿದ್ದಾರೆ.

ವೇದಾಂತ ದರ್ಶನವನ್ನು ಅಧ್ಯಯನ ಮಾಡಿದ್ದ ರಾಮಮೋಹನ ರಾಯ್ ಚಿಂತನೆ ಸ್ಫುಟವಾಗಿತ್ತು. ಒಂದೂವರೆ ಸಾವಿರ ವರ್ಷಗಳಿಂದ ಕ್ಷಾತ್ರ ವೃತ್ತಿಯನ್ನು ದುರ್ಲಕ್ಷಿಸಿ, ತನ್ನ ಸ್ವಾವಲಂಬನೆ, ಗತಿಶೀಲತೆಗಳನ್ನು ಕಳೆದುಕೊಂಡು ನಿಸ್ತೇಜವಾಗಿದ್ದ ಸಮಾಜ ವಿಸಂಘಟಿತವೂ, ಆಂತರಿಕವಾಗಿ ದುರ್ಬಲವೂ ಆಗಿತ್ತು. ವಿಗ್ರಹಾರಾಧನೆಯನ್ನು ವಿರೋಧಿಸಿ ಕುಟುಂಬದಿಂದ ಹೊರ ಹಾಕಿಸಲ್ಪಟ್ಟ ರಾಯ್ ನಾಲ್ಕು ವರ್ಷ ಟಿಬೆಟ್ ಮೊದಲಾದ ಕಡೆ ಸಂಚಾರದಲ್ಲೇ ಇದ್ದರು. ಮೇಧಾವಿಯಾದ ಅವರಿಗೆ ಸರಕಾರದಲ್ಲಿ ಜಿಲ್ಲಾ ಕಲೆಕ್ಟರ್ ಹುದ್ದೆ, ರಾಜಾ ಬಿರುದು ಸಿಕ್ಕಿತು. ಹತ್ತು ವರ್ಷ ಕೆಲಸ ಮಾಡಿ, ಧನಸಂಗ್ರಹಿಸಿ ಅನಂತರ ಬ್ರಹ್ಮಸಮಾಜ ಸ್ಥಾಪಿಸಿ ಸಮಾಜ ಜಾಗೃತಿಗೆ ಶ್ರಮಿಸಿದರು. ೧೮೨೯ರಲ್ಲಿ ಸತಿ ಪದ್ಧತಿಯನ್ನು ಸರಕಾರ ಹಾಗೂ ಸಮಾಜದ ಸಹಕಾರದಿಂದ ತೊಡೆದು ಹಾಕಿದರು. ಕ್ರೈಸ್ತ, ಇಸ್ಲಾಂ ಮತಗಳನ್ನು ಆಳವಾಗಿ ಅಧ್ಯಯನ ಮಾಡಿದ ರಾಯ್ ಮಿಷನರಿ ಪ್ರಚಾರದ ವಿಕೃತಿಗಳ ವಿರುದ್ಧ ಹೋರಾಡಿದರಲ್ಲದೆ ವಿಚಾರಗಮ್ಯ ಹಿಂದೂ ಧರ್ಮ ಸ್ಥಾಪನೆಗೆ ಪ್ರಯತ್ನಿಸಿದರು. ಆಧುನಿಕ ವಿಜ್ಞಾನಶಿಕ್ಷಣದ ಪರವಾಗಿದ್ದರು. ಇಂಗ್ಲೆಂಡಿನ ಸಂಸದೀಯ ತಜ್ಞ ಸಮಿತಿಯ ಆಹ್ವಾನದಂತೆ ನ್ಯಾಯಾಂಗ, ಆರ್ಥಿಕ ಹಾಗೂ ರಾಜಕೀಯ ಸುಧಾರಣೆಗಳ ಬಗ್ಗೆ ಸೂಚನಾವಳಿಯನ್ನು ನೀಡಿದ್ದರು. ತಮ್ಮ ಅಭಿಪ್ರಾಯ ಪ್ರಕಟನೆಗಾಗಿ ಪತ್ರಿಕೆಗಳನ್ನು, ಮುದ್ರಣಾಲಯವನ್ನು ಸ್ಥಾಪಿಸಿ, ಪತ್ರಿಕೆಯ ನಿರ್ಬಂಧಗಳ ವಿರುದ್ಧ ಹೋರಾಡಿದರು. ಬ್ರಿಟಿಷರ ಪರವಾಗಿ ದೆಹಲಿ ಸುಲ್ತಾನನ ಜತೆ ದೌತ್ಯ ನಡೆಸಿದರು. ಬ್ರಿಟಿಷ್ ಪ್ರಭುತ್ವದ ಆಹ್ವಾನದ ಮೇರೆ ಇಂಗ್ಲೆಂಡಿಗೆ ಹೋದ ಪ್ರಜ್ವಲ ನವಭಾರತದ ಹರಿಕಾರ ರಾಯ್ ಅಲ್ಲೇ ತೀರಿಕೊಂಡರು.

ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಬಗೆಗೆ ಶ್ರೀ ರಾಮಸ್ವಾಮಿಯವರ ಒಲವು ಅವರ 'ವಿವೇಕಾನಂದ ಸಂದೇಶ ಕೌಮುದಿ' ಮತ್ತು ಇತರ ಗ್ರಂಥಗಳಲ್ಲಿಯೂ ವಿವರವಾಗಿ ಪ್ರಕಟವಾಗಿದೆ. ಎಲ್ಲ ಸುಧಾರಣೆಗೆ ಸಮರ್ಥ ಮಾಧ್ಯಮವೆಂದರೆ ಹೃದಯ ಪರಿವರ್ತನೆ ಎಂಬುದನ್ನು ಶ್ರೀರಾಮಕೃಷ್ಣರು ಮಂಡಿಸಿದ ವಿವರ, ಅನುಭವಕ್ಕೆ ಅವರು ಕೊಟ್ಟ ಒತ್ತು, ಸಮನ್ವಯ ಪ್ರಜ್ಞೆ, ಆಧುನಿಕ ಶಿಕ್ಷಣದ ವ್ಯರ್ಥತೆ ಮತ್ತು ಧನದಾಹಗಳು ಅವನತಿಗೆ ಕಾರಣ ಎಂಬ ಅರಿವು, ಸೇವೆಯ ಬಗ್ಗೆ ಅದೂ ಸಾಧನೆಯೆ ಎನ್ನುವ ಅವರ ನುಡಿ 'ಶಿವಜ್ಞಾನೇ ಜೀವಸೇವಾ' – ಈ ಅಂಶಗಳನ್ನು ಇಲ್ಲಿ ವಿವರಿಸಿದ್ದಾರೆ. ಶ್ರೀರಾಮಕೃಷ್ಣರ ಶಿಷ್ಯ ಸ್ವಾಮಿ ವಿವೇಕಾನಂದರು ಮೇಲಿನ ವಿಚಾರಗಳನ್ನು ಕೃತಿಗೆ ತಂದುದಲ್ಲದೆ, 'ಪ್ರತಿಯೊಂದು ಆತ್ಮವೂ ಮೂಲಸ್ವರೂಪದಲ್ಲಿ ಪವಿತ್ರವಾದದ್ದು; ಸುಪ್ತವಾಗಿರುವ




*ಕೃತಿ*
**ನವೋತ್ಥಾನದ ಅಧ್ವರ್ಯುಗಳು**
*ಲೇಖಕರು*
**ಎಸ್.ಆರ್. ರಾಮಸ್ವಾಮಿ**
*ಪ್ರಕಾಶಕರು*
**ರಾಷ್ಟ್ರೋತ್ಥಾನ ಸಾಹಿತ್ಯ, 'ಕೇಶವಶಿಲ್ಪ', ಕೆಂಪೇಗೌಡನಗರ, ಬೆಂಗಳೂರು – 560 019**
*ಪುಟಗಳು* : **284**
*ಬೆಲೆ* : **200/-**

ಈ ಪವಿತ್ರತೆಯನ್ನು ಜಾಗೃತಗೊಳಿಸಬೇಕಾದ್ದೇ ಈಗಿನ ಯುಗ ಧರ್ಮ' ಎಂಬ ತಮ್ಮ ಕಾಣ್ಕೆಯನ್ನು ಪ್ರಚಾರ ಮಾಡಿ, ಹಿಂದೂ ಧರ್ಮಕ್ಕೆ ಹೊಸ ಆಯಾಮ ನೀಡಿದರು. ಈ ಚಿಂತನೆಗಳ ಸಾಂದ ರ್ಭಿಕತೆಯನ್ನು ಸೂಚಿಸಿ, ಸ್ವಾಮೀಜಿ ಪಾಶ್ಚಾತ್ಯರಿಗೆ ಅರ್ಥವಾಗುವ ಹೊಸ ನುಡಿಗಟ್ಟಿನ ನಿರ್ಮಾಣ ಮಾಡಿದ್ದನ್ನು ವಿವರಿಸುವುದು ಈ ಲೇಖನದ ವೈಶಿಷ್ಟ್ಯ.

ಬ್ರಿಟಿಷರ ಅಸಹನೀಯ ದಮನಕಾರಿ ಆಳ್ವಿಕೆಯಲ್ಲಿ ಭಾರತೀಯರ ಆತ್ಮವಿಶ್ವಾಸ ನಿರ್ಮಾಣ, ಸಾಂಸ್ಕೃತಿಕ-ಆಧ್ಯಾತ್ಮಿಕ ಜೀವನದ ಪುನರ್ನಿರ್ಮಾಣ ಮಾಡಿದವರಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರು ಮುಖ್ಯರು. ನಮ್ಮವರು ತಮ್ಮದಲ್ಲದ ಇನ್ನೊಂದು ಭಾಷೆ ಕಲಿಯಬೇಕು, ಸ್ವರಾಜ್ಯಕ್ಕೆ ಸುರಾಜ್ಯ ಪರ್ಯಾಯವಲ್ಲ, ಇಲ್ಲಿನ ಪರಂಪರೆಗೆ ಅನುಗುಣವಾದ ಆಡಳಿತ ಪದ್ಧತಿ ಇರಬೇಕು, ವೇದವೇ ಹಿಂದೂಧರ್ಮದ ಆಧಾರ ಸ್ತಂಭ ಎಂಬ ಸಮಾಜವನ್ನು ಒಗ್ಗೂಡಿಸುವ ದೂರದೃಷ್ಟಿಯ ಅಭಿಯಾನಸರಣಿಯನ್ನು ಪ್ರಾರಂಭಿಸಿದವರು ಸ್ವಾಮಿ ದಯಾನಂದ ಸರಸ್ವತಿ. ಅವರು ಸ್ಥಾಪಿಸಿದ ಆರ್ಯ ಸಮಾಜ ನಮ್ಮ ಸಮಾಜದ ಅನಿಷ್ಟ ಪದ್ಧತಿಗಳನ್ನು ಮೂಲೋತ್ಪಾಟನ ಮಾಡಲು ಶ್ರಮಿಸಿತು. ಇಂದಿಗೂ ಅಂತರ್ಮತೀಯ ವಿವಾಹ, ಮತಾಂತರಿತರನ್ನು ಮರಳಿ ಮಾತೃಧರ್ಮಕ್ಕೆ ಕರೆತರುವುದು ಮೊದಲಾದ ಕೆಲಸಗಳನ್ನು ಆರ್ಯಸಮಾಜ ನಡೆಸುತ್ತಿದೆ. ಅವರ 'ಸತ್ಯಾರ್ಥಪ್ರಕಾಶ' ಮತಾಂತರ, ಮಿಷನರಿಗಳ ಪ್ರಭಾವವನ್ನು ಎದುರಿಸಲು ಸಮಾಜಕ್ಕೆ ವೈಚಾರಿಕ ಕ್ಷಾತ್ರವನ್ನು ನೀಡಿತು. ಹಿಂದಿಯನ್ನು ಅತಿ ಸರಳಗೊಳಿಸಿ ಸ್ವದೇಶೀ ಸಿದ್ಧಾಂತವನ್ನು ಹರಡಿದರು. ಪ್ರಸಿದ್ಧಕಾಶೀವಾಕ್ಯಾರ್ಥದಲ್ಲಿ ಅಕ್ಷರೈಕನಿಷ್ಠಸಾಂಪ್ರದಾಯಿಕ ಪಂಡಿತರನ್ನು ಮಣಿಸಿ, ಜಾತಿವ್ಯವಸ್ಥೆಯ ಸುಧಾರಣೆಗೆ ಪ್ರಚಾರ ನೀಡಿದರು. ಸ್ವಾತಂತ್ರ್ಯ ಹೋರಾಟ ಹಾಗೂ ಸಮಾಜ ಸುಧಾರಣೆ ಒಟ್ಟಿಗೆನಡೆಯಬೇಕೆಂದು ಪ್ರತಿಪಾದಿಸಿದರು. ವೇದಾರ್ಥಸಂಧಾನಕ್ಕೆ ಕೇವಲ ಭಾಷಾಜ್ಞಾನವಲ್ಲದೆ ಅಂತರ್ದೃಷ್ಟಿ ಅಗತ್ಯವಿದ್ದು, ದಯಾನಂದರು ಅದನ್ನು ಒದಗಿಸಿ ವಿದೇಶೀಯರ ವಿಕೃತ ಅರ್ಥನಿರ್ಣಯಗಳನ್ನು ತಳ್ಳಿಹಾಕಿದರು. ಸದಾ ವಾದವಿವಾದಗಳಲ್ಲಿ ತೊಡಗುತ್ತ, ಎಲ್ಲ ಪ್ರದೇಶಗಳ ವಿದ್ವಾಂಸರುಗಳ ಜೊತೆ ಚರ್ಚಿಸಿ, ಆರ್ಯ ಸಮಾಜವನ್ನು ವಿಸ್ತರಿಸುತ್ತ ರಾಷ್ಟ್ರವಿಗ್ರಹವನ್ನು ರೂಪಿಸಿದ ಸ್ವಾಮಿ ದಯಾನಂದರ ಚಿತ್ರಣ ಮನನೀಯವಾಗಿದೆ.

ಭಾರತೀಯರ ಧಾರ್ಮಿಕ ಆಧ್ಯಾತ್ಮಿಕ ಸಾಮಾಜಿಕ ಚೇತರಿಕೆ ಹಾಗೂ ಸ್ವಾಭಿಮಾನದ ಜಾಗೃತಿಯು ನವೋತ್ಥಾನಪರ್ವದ ಲಕ್ಷಣಗಳಾಗಿದ್ದು, ಈ ಎಚ್ಚರವನ್ನು ಸಮಾಜದಲ್ಲಿ ಹರಡಿದವರಲ್ಲಿ ಸ್ವಾಮಿ ರಾಮತೀರ್ಥರು ಒಬ್ಬರು. ವಿವೇಕಾನಂದರು ಸೇವಾಕಾರ್ಯಕ್ಕೆ ಒತ್ತು ನೀಡಿದರೆ, ದೇಶ, ದೇಶದ ಜನತೆಯೊಡನೆ ಐಕ್ಯತೆ ಸಾಧಿಸುವುದು ಮುಖ್ಯ ಎಂದವರು ರಾಮತೀರ್ಥರು. ವಿವೇಕಾನಂದರಂತೆಯೆ ರಾಮತೀರ್ಥರೂ ಭಾರತದೊಳಗಡೆ ಹಾಗೂ ಜಪಾನ್, ಅಮೆರಿಕಾ ಮೊದಲಾದ ದೂರದೇಶಗಳಲ್ಲೂ ಭಾರತೀಯ ಆಧ್ಯಾತ್ಮಿಕ ಸೌಗಂಧವನ್ನು ಪಸರಿಸಿ, ತಾರುಣ್ಯದಲ್ಲೇ ಬ್ರಹ್ಮಲೀನರಾದರು. ಈ ಲೇಖನದಲ್ಲಿ ಘಟನೆಗಳು ಹಾಗೂ ದೃಷ್ಟಾಂತ ಕತೆಗಳಿಗೆ ಪ್ರಾಶಸ್ತ್ಯವಿದ್ದು, ಆಕರ್ಷಕವಾಗಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೀವ್ರಗಾಮಿಗಳ ಜೊತೆ ಸಂಬಂಧ ಹೊಂದಿದ್ದ ಕ್ರಾಂತಿಕಾರಿ ಅರವಿಂದರು ಪ್ರಭುತ್ವದೊಡನೆ ಅಸಹಕಾರ, ಪೂರ್ಣಸ್ವಾತಂತ್ರ್ಯಕ್ಕಾಗಿ ಆಗ್ರಹ, ವಿದೇಶೀ ವಸ್ತು ಬಹಿಷ್ಕಾರ, ನಿಃಶಸ್ತ್ರ ಪ್ರತಿರೋಧದ ಸಂದೇಶಗಳನ್ನು 'ಯುಗಾಂತರ', 'ವಂದೇ ಮಾತರಂ' ಪತ್ರಿಕೆಗಳ ಮೂಲಕ ಸತತವಾಗಿ ಪ್ರಕಟಿಸಿದರು. ಅವರ ಸೋದರ ಬಾರೀಂದ್ರರ ತಂಡದ ಕ್ರಾಂತಿಕಾರಿಗಳು ನ್ಯಾಯಾಧೀಶ ಕಿಂಗ್ಸ್‌ಫರ್ಡ್‌ನನ್ನು ಕೊಂದ ಮೊಕದ್ದಮೆಯಲ್ಲಿ ಬಿಡುಗಡೆಯಾದ ಮೇಲೆ ಪುದುಚೇರಿಗೆ ಹೋಗಿ ನೆಲೆಸಿ, ಅಧ್ಯಾತ್ಮ ಸಾಧನೆ, ವೈಚಾರಿಕ ಪಯಣದಲ್ಲಿ ತೊಡಗಿದರು. ಭಾರತಕ್ಕೆ ಆಧ್ಯಾತ್ಮಿಕತೆ ಮಾತ್ರ ತಾರಕವಾಗಬಲ್ಲುದು ಎಂದು ಕಂಡುಕೊಂಡರು.

ಪಂಡಿತ್ ಮದನ ಮೋಹನ ಮಾಲವೀಯ ಅವರು ನಾಲ್ಕು ದಶಕಗಳಷ್ಟು ದೀರ್ಘಕಾಲ ಮುಂಚೂಣಿಯ ನಾಯಕರಲ್ಲಿ ಒಬ್ಬರಾಗಿದ್ದರು. ರಾಜಕಾರಣ, ಸಂಸ್ಕೃತಿ ಪ್ರಸಾರಗಳು ಅವರ ಉಸಿರಾಗಿದ್ದರೂ, ಅವರ ಮುಖ್ಯ ಕಾರ್ಯ ಬನಾರಸ್ ಹಿಂದೂ ವಿಶ್ವವಿದ್ಯಾಲಯ. ದೂರಗಾಮಿ ಚಿಂತನೆ, ಸುಧಾರಕ ದೃಷ್ಟಿ, ವಸ್ತುನಿಷ್ಠ ನಿಲುವು, ಜನಪರ ಚಿಂತನೆಗಳಿದ್ದ ಮಾಲವೀಯರ ಸಂದೇಶ 'ಈ ರಾಷ್ಟ್ರಕ್ಕೆ ಉತ್ತಮ ಭವಿಷ್ಯ ನೀಡಬಲ್ಲದ್ದು ಅನನ್ಯ ಧರ್ಮವಾದ ಹಿಂದೂ ಸಂಘಟನೆ ಮಾತ್ರ' ಎಂಬುದು. ಸನಾತನ ಧರ್ಮ ಪ್ರಸಾರ, ಗೋಸೇವೆ, ಅಸ್ಪೃಶ್ಯೋದ್ಧಾರ, ಸ್ವದೇಶೀ, ಹಿಂದೀ ಪ್ರಚಾರ, ಸಂಸ್ಕೃತ ಸಾಹಿತ್ಯ ಹಾಗೂ ಶಾಸ್ತ್ರಾಧ್ಯಯನದ ಪ್ರವರ್ತನೆ ಮುಂತಾದ ಎಲ್ಲ ಆಂದೋಲನಗಳಲ್ಲಿ ಮಾಲವೀಯರು ಕೆಲಸ ಮಾಡಿದುದನ್ನು ಲೇಖಕರು ವಿವರಿಸಿದ್ದಾರೆ.

ವಿಶ್ವಕವಿ ರವೀಂದ್ರನಾಥ ಠಾಕೂರರನ್ನು ನವೋತ್ಥಾನದ ಅಗ್ರಣಿ ಎಂದು ರಾಮಸ್ವಾಮಿಯವರು ಕರೆದಿದ್ದಾರೆ. ವಿಶಾಲ ಜನಸ್ಪಂದನ ಹೊಂದಿದ್ದ ರವೀಂದ್ರರಿಗೆ ಜಾಗತಿಕ ಮನ್ನಣೆ ಸಿಕ್ಕು, ಅವರನ್ನು ಭಾರತದ ಸಾಂಸ್ಕೃತಿಕ ರಾಯಭಾರಿ ಎಂದು ಪರಿಗಣಿಸಿದ್ದರು. ಭಾರತದ ಸಾಂಸ್ಕೃತಿಕ, ಸಾಹಿತ್ಯಿಕ, ವೈಚಾರಿಕ ಕ್ಷೇತ್ರಗಳಲ್ಲಿ ಇವರು ಅನುಪಮ ಕೊಡುಗೆ ನೀಡಿದುದನ್ನು ವಿವರಿಸಿ, ಆಧುನಿಕ ಭಾರತ ನಿರ್ಮಾಪಕರಲ್ಲಿ ಉನ್ನತ ಸ್ಥಾನ ಪಡೆದುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

ಈ ಎಂಟು ಮಹಾನ್ ಚೇತನಗಳ ವ್ಯಕ್ತಿ ಪರಿಚಯ, ಮಾಡಿದ ಕೆಲಸ, ನೀಡಿದ ಪ್ರೇರಣೆಗಳನ್ನು ವಿವರಿಸುವುದರ ಜೊತೆಗೆ, ಕೊನೆಯಲ್ಲಿ ಅವರ ಸೂಕ್ತಿಗಳು, ಜೀವನ ರೇಖೆಗಳನ್ನು ನೀಡಿ, ಅವರ ವ್ಯಕ್ತಿತ್ವದ ಪರಿಪೂರ್ಣ ನೋಟವನ್ನು ಸಂಕ್ಷಿಪ್ತವಾಗಿ ನೀಡಿ, ಲೇಖಕರು ಕನ್ನಡ ಓದುಗರಿಗೆ ಮಹದುಪಕಾರ ಮಾಡಿದ್ದಾರೆ. ಆಧುನಿಕ ಭಾರತದ ನಿರ್ಮಾತೃಗಳಾದ ಇಂತಹ ಧೀಮಂತ ವ್ಯಕ್ತಿಗಳ ಕೊಡುಗೆಯನ್ನು ಸ್ಮರಿಸುವುದು ಈಗಿನ ಅಗತ್ಯವೇ ಸರಿ. ಶ್ರೀ ರಾಮಸ್ವಾಮಿಯವರ ಶೈಲಿ ಅತಿ ಗಂಭೀರ. ಹೆಚ್ಚಾಗಿ ಬಳಕೆಯಲ್ಲಿಲ್ಲದ 'ಲಾಗೋಡು' ಮುಂತಾದ ಪದಗಳನ್ನು, ಪ್ರಯೋಗಗಳನ್ನು ಬಳಸಿ ಹೊಸತನವನ್ನು ತಂದಿದ್ದಾರೆ. ಸಂಸ್ಕೃತ ಭೂಯಿಷ್ಠತೆ ಸಾಮಾನ್ಯ ಓದುಗರಿಗೆ ಸ್ವಲ್ಪ ಕಷ್ಟಕರ.

*-ಡಾ. ಹೆಚ್.ಪಾಂಡುರಂಗ ವಿಠಲ*